## ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1056 (1257) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | ರಾಜ್ಯದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಚಿತ್ರಕಲಾ ವಿಷಯ ಪರಿವೀಕ್ಷಕರು. ಕಲಾಬೋಧಕರ ಹಾಗೂ ಕಲಾವಿದರ ಹುದ್ದೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) ಈ ಹುದ್ದೆಗಳಿಗೆ ಪ್ರೌಢ ಶಾಲಾ ಹಿರಿಯ ಚಿತ್ರಕಲಾ ಶಿಕ್ಷಕರಿಗೆ ಸೇವಾ ಜೇಷ್ಠತಾ ಆಧಾರದ ಮೇಲೆ ಮುಂಬಡ್ತಿ ನೀಡಲು ವಿಳಂಬವಾಗುತ್ತಿರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ; | ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲ್ಬುರ್ಗಿ ವಿಭಾಗದಲ್ಲಿ ಗ್ರೂಪ್ ಬಿ ವೃಂದದ ಚಿತ್ರಕಲಾ ವಿಷಯ ಪರಿವೀಕ್ಷಕರು, ಕಲಾಬೋಧಕರು ಮತ್ತು ಕಲಾವಿದರು ವೃಂದದಲ್ಲಿ ಖಾಲಿಯಿರುವ ಹುದ್ದೆಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ವೃಂದದಿಂದ ಗ್ರೂಪ್ ಬಿ ವೃಂದದ ಚಿತ್ರಕಲಾ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 04 ಡಿಪಿಐ 2019, ದಿನಾಂಕ:04.09.2023 ರನ್ವಯ ಆಯಾ ಆಯುಕ್ತಾಲಯಗಳು ಗ್ರೂಪ್ ಬಿ ವೃಂದದ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರಿಯಾಗಿರುವುದರಿಂದ ಆಯುಕ್ತಾಲಯವಾರು ಜೇಷ್ಠತಾ ಪಟ್ಟಿ ಪ್ರಕಟಿಸಿ ನಂತರ ವಿಳಂಬವಿಲ್ಲದಂತೆ ನಿಯಮಾನುಸಾರ ಬಡ್ತಿ ಕ್ರಮಗಳನ್ನು ಕೈಗೊಳ್ಳಲಾಗುವುದು. |
| ಆ) | ಪ್ರತಿ ಜಿಲ್ಲೆಯ ಉಪ ನಿರ್ದೇಶಕರ ಕಾರ್ಯಾಲಯದಲ್ಲಿ ಚಿತ್ರಕಲಾ ವಿಷಯ ಪರಿವೀಕ್ಷಕರ ಹುದ್ದೆ ಸೃಜಿಸಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಿಗೆ ಮುಂಬಡ್ತಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ? | ಅಂತಹ ಪ್ರಸ್ತಾವನೆ ಇರುವುದಿಲ್ಲ. |
| ಇ) | ಇಲಾಖೆಯಲ್ಲಿ ದೈಹಿಕ ಶಿಕ್ಷಣಕ್ಕೆ ಪ್ರತ್ಯೇಕ ಪಠ್ಯಪುಸ್ತಕವನ್ನು ರಚಿಸಿದ್ದು, ಚಿತ್ರಕಲಾ ಶಿಕ್ಷಣದ ಪಠ್ಯಪುಸ್ತಕವನ್ನು ರಚಿಸದೆ ಇರಲು ಕಾರಣವೇನು; ಅದರಂತೆ ಕರ್ನಾಟಕ ಮೌಲ್ಯ ನಿರ್ಣಯ ಮಂಡಳಿ ಚಿತ್ರಕಲಾ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳುತ್ತಿದ್ದು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಚಿತ್ರಕಲಾ ಶಿಕ್ಷಣದ ಬೋಧನೆಯಂತೆ ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಅಂಕಪಟ್ಟಿ ಕೂಡ ಮಂಡಳಿಯಿಂದ ನೀಡಲಾಗುತ್ತಿದ್ದು, ಆದರೆ ರಾಜ್ಯದಾದ್ಯಂತ ಏಕ ಮಾದರಿ ಚಿತ್ರಕಲಾ ಶಿಕ್ಷಣ ಪಠ್ಯಪುಸ್ತಕ ಇರದೇ ಇರುವುದು ವಿಷಾದನೀಯವಾಗಿದ್ದು, ಯಾವ ಕಾಲಮಿತಿಯಲ್ಲಿ ಚಿತ್ರಕಲಾ ಶಿಕ್ಷಣದ ಪಠ್ಯಪುಸ್ತಕವನ್ನು ರಚಿಸಲಾಗುವುದು? | NEP ಆಧಾರಿತ POSITION PAPER ಸಿದ್ದತೆ ಪೂರ್ಣಗೊಂಡಿರುತ್ತದೆ. ಈ ಮಧ್ಯೆ ರಾಜ್ಯದ ಪ್ರಸ್ತುತತೆಗೆ ಅನುಗುಣವಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸುವ ಸಂಬಂಧ ಉನ್ನತ ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ರಾಜ್ಯ ಶಿಕ್ಷಣ ನೀತಿ ರಚನೆಗೆ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರನ್ವಯ ರಾಜ್ಯ ಪಠ್ಯಕ್ರಮ ಚೌಕಟ್ಟು ಸಿದ್ಧಪಡಿಸುವ ಸಂದರ್ಭದಲ್ಲಿ ಅಗತ್ಯ ಪಠ್ಯಕ್ರಮ ಹಾಗೂ ಪಠ್ಯವಸ್ತುಗಳ ರಚನೆಗೆ ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ಇಪಿ 53 ಎಲ್‌ಬಿಪಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

## -:ಅನುಬಂಧ:-

**ಖಾಲಿ ಹುದ್ದೆಗಳ ವಿವರ:-**

| ಕ್ರ ಸಂ | ಗ್ರೂಪ್ ಬಿ ಹುದ್ದೆಯ ಹೆಸರು ಮತ್ತು ಕಛೇರಿ ವಿಳಾಸ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಲಾವಿದ ಹುದ್ದೆಗಳು, ಆಯುಕ್ತರ ಕಛೇರಿ, ಬೆಂಗಳೂರು ಮತ್ತು ಕಲಬುರಗಿ, ಕರ್ನಾಟಕ ಪಠ್ಯಪುಸ್ತಕ ಸಂಘ ಮತ್ತು ಡಿ.ಎಸ್.ಇ.ಆರ್.ಟಿ, ಬೆಂಗಳೂರು | 4 ಹುದ್ದೆಗಳು, |
| 2 | ಚಿತ್ರಕಲಾ ವಿಷಯ ಪರಿವೀಕ್ಷಕ ಹುದ್ದೆಗಳು, ಸಹ ನಿರ್ದೇಶಕರ ಕಛೇರಿ, ಬೆಂಗಳೂರು, ಮೈಸೂರು ಮತ್ತು ಕಲಬುರಗಿ ವಿಭಾಗ | 3 ಹುದ್ದೆಗಳು, |
| 3 | ಚಿತ್ರಕಲಾ ಕಲಾಬೋದಕರು ಹುದ್ದೆಗಳು, ಸಿ.ಟಿ.ಇ, ಮೈಸೂರು, ಮಂಗಳೂರು, ಚಿತ್ರದುರ್ಗ, ಬೆಳಗಾವಿ, ಜಮಕಂಡಿ, ಕಲಬುರಗಿ | 6 ಹುದ್ದೆಗಳು. |
| ಒಟ್ಟು | | 13 **ಹುದ್ದೆ** |

B.S.R

ನಿರ್ದೇಶಕರು(ಮೈನಾರಿಟಿ)